ನಿವೇಶನ : ಮನೆಗಳ ಗುರಿಯನ್ನು ಜಿಲ್ಲಾ ಪಂಚಾಯಿತಿಯಿಂದ ಪಡೆದ ಮೇಲೆ ಅದನ್ನು ಗ್ರಾಮ ಪಂಚಾಯಿತಿ ಹಾಗೂ ಗ್ರಾಮವಾರು ಗುರಿಗಳನ್ನು ನಿಗದಿಪಡಿಸತಕ್ಕದ್ದು.

ಗ್ರಾಮ ಪಂಚಾಯಿತಿಗಳು ತಾಲ್ಲೂಕು ಪಂಚಾಯಿತಿಯಿಂದ ವಾರ್ಷಿಕ ಗುರಿಯನ್ನು ಪಡೆದ ಮೇಲೆ ಗ್ರಾಮಗಳಲ್ಲಿ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯಲ್ಲಿ ಕಾಣಿಸಿದಂತೆ ನಿಯಮಾನುಸಾರ ಗ್ರಾಮ ಸಭೆಗಳನ್ನು ನಡೆಸಿ, ಗ್ರಾಮ ಸಭೆಯಲ್ಲಿ "ಬಡವರಲ್ಲಿ ಬಡವರು" ತತ್ವದ ಆಧಾರದ ಮೇಲೆ ಗುರಿಗೆ ಸರಿಹೊಂದುವಂತೆ ಫಲಾನುಭವಿಗಳ ಪಟ್ಟಿಯನ್ನು ತಮ್ಮ ಶಿಫಾರಸ್ಸಿನೊಂದಿಗೆ ವಸತಿ : ನಿವೇಶನಗಳನ್ನು ನೀಡಲು ತಾಲ್ಲೂಕು ಪಂಚಾಯಿತಿಗೆ ಬರೆಯತಕ್ಕದ್ದು. ಇದನ್ನು ಆಧರಿಸಿ ತಾಲ್ಲೂಕು ಪಂಚಾಯಿತಿಯು ಗ್ರಾಮ ಪಂಚಾಯಿತಿ ಸಲ್ಲಿಸಿರುವ ಪಟ್ಟಿಯಲ್ಲಿ ಸೂಚಿಸಿರುವ ಫಲಾನುಭವಿಗಳಿಗೆ ಮಾತ್ರ ಮನೆ : ನಿವೇಶನಗಳನ್ನು ಕೊಡತಕ್ಕದ್ದು. ಇದರ ಹೊರತು ಬೇರೆಯವರಿಗೆ ಕೊಡಲು ಸಾಧ್ಯವಿಲ್ಲ. ಇದನ್ನು ಗುಲ್ಬರ್ಗಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ದಿನಾಂಕ 19-2-96ರ ನಿಕ್‌ನೆಟ್ ಸಂದೇಶದ ಮೂಲಕ ಸಂಬಂಧಪಟ್ಟ ಯಾದಗಿರಿ ತಾಲ್ಲೂಕು ಪಂಚಾಯಿತಿಗೆ ಕಾನೂನಿನ ಚೌಕಟ್ಟಿನಲ್ಲಿ ಆಯ್ಕೆ ಮಾಡುವಂತೆ ನಿರ್ದೇಶನ ನೀಡಬೇಕೆಂದು ತಿಳಿಸಲಾಯಿತು. ಇದರ ಪ್ರತಿಯನ್ನು ಸಂಬಂಧಪಟ್ಟ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೂ ಕಳುಹಿಸಲು ಸೂಚನೆ ನೀಡಲಾಗಿದೆ. ಹಾಗೂ ಜಿಲ್ಲಾಪರಿಷತ್ ಮುಖ್ಯ ಕಾರ್ಯನಿರ್ವಾಧಿಕಾರಿಗಳು ಯಾದಗಿರಿ ತಾಲ್ಲೂಕಿಗೆ ಭೇಟಿ ನೀಡಿ ಫಲಾನುಭವಿಗಳನ್ನು ನಿಯಮಾವಳಿಗಳಲ್ಲಿ ಇರುವಂತೆ ಗುರ್ತಿಸಲು ಪ್ರಭಾರ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ಆದೇಶ ನೀಡಿದ್ದಾರೆ. ಅದರಂತೆ ಪ್ರಭಾರ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ನಿಯಮಾವಳಿಗಳಂತೆ ಫಲಾನುಭವಿಗಳಿಗೆ ಆಯ್ಕೆ ಮಾಡಿ ಜಿಲ್ಲಾ ಪಂಚಾಯತ್ ಅನುಮೋದನೆಗಳಿಗೆ ಕಳುಹಿಸಿದ್ದಾರೆ.

8) ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ಕಳ್ಳತನ ದರೋಡೆಗಳ ಬಗ್ಗೆ

ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಅಧ್ಯಕ್ಷರೆ, ಕಳ್ಳತನ ಮತ್ತು ದರೋಡೆಗಳ ಪ್ರಕರಣಗಳು ಹೆಚ್ಚಾಗುತ್ತಿದ್ದು ಇದರಿಂದ ಜನಸಾಮಾನ್ಯರಲ್ಲಿ ಭೀತಿಯ ವಾತಾವರಣ ಉಂಟಾಗಿದೆ. ಹಗಲಿನಲ್ಲಿ ಮನೆಗಳ ಬಾಗಿಲುಗಳನ್ನು ಒಡೆದು ಮನೆಗಳ್ಳತನ ಮಾಡುವುದು ಮತ್ತು ಸರಗಳ್ಳತನ ಮಾಡುವುದು ಹೆಚ್ಚಾಗಿದ್ದು ಸರ್ಕಾರ ಕೂಡಲೇ ಇದರ ಬಗ್ಗೆ ಕ್ರಮಕೈಗೊಳ್ಳಬೇಕಾಗಿದೆ. ಜನರಲ್ಲಿ ಉಂಟಾಗಿರುವ ಭಯದ ವಾತಾವರಣವನ್ನು ದೂರ ಮಾಡಲು ಹೆಚ್ಚಿನ ಪೋಲೀಸ್ ಪಹರೆಯನ್ನು ಮತ್ತು ರಾತ್ರಿಯ ವೇಳೆ ಗಸ್ತು ಹೆಚ್ಚು ಮಾಡಬೇಕಾಗಿದೆ. ಈ ಬಗ್ಗೆ ಸರ್ಕಾರ ಕೈಗೊಂಡಿರುವ ಹಾಗೂ ಕೈಗೊಳ್ಳಲಿರುವ ಕಾರ್ಯಕ್ರಮವನ್ನು ಸದನಕ್ಕೆ ತಿಳಿಸಬೇಕೆಂದು ಮಾನ್ಯ ಗೃಹ ಸಚಿವರನ್ನು ಕೊರುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯನ್ನು ಪಡೆದು ನಾನು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

1994ನೇ ಸಾಲಿನಲ್ಲಿ 11,707 ಕಳ್ಳತನದ ಪ್ರಕರಣಗಳು ವರದಿಯಾಗಿದದು, 2441 ಪ್ರಕರಣಗಳು ಪತ್ತೆಯಾಗಿರುತ್ತದೆ. 1995ನೇ ಸಾಲಿನಲ್ಲಿ 11,224ಪ್ರಕರಣಗಳು ವರದಿಯಾಗಿದ್ದು 2728 ಪ್ರಕರಣಗಳು ಪತ್ತೆಯಾಗಿರುತ್ತವೆ. ಈ ಅಂಕಿ ಸಂಖ್ಯೆಗಳನ್ನು ಗಮನಿಸಿದಾಗ ಕಳ್ಳತನದ ಪ್ರಕರಣಗಳು 1995ನೇ ಸಾಲಿನಲ್ಲಿ ಇಳಿಮುಖವಾಗಿದ್ದು ಪತ್ತೆಯಾದ ಪ್ರಕರಣಗಳು ಹೆಚ್ಚಿದ್ದು ಗಮನಕ್ಕೆ ಬರುತ್ತದೆ.

ದರೋಡೆ ಮತ್ತು ಡಕಾಯಿತಿ ಪ್ರಕರಣಗಳನ್ನು ಗಮನಿಸಿದರೆ 1994ರಲ್ಲಿ 407 ಪ್ರಕರಣಗಳು ವರದಿಯಾಗಿದ್ದು, 177 ಪ್ರಕರಣಗಳು ಪತ್ತೆಯಾಗಿವೆ. 1995ರಲ್ಲಿ 353 ಪ್ರಕರಣಗಳು ವರದಿಯಾಗಿದ್ದು, 160 ಪ್ರಕರಣಗಳು ಪತ್ತೆಯಾಗಿವೆ. ಈ ಅಂಕಿ

ಸಂಖ್ಯೆಗಳನ್ನು ಗಮನಿಸಿದಾಗ ವರದಿಯಾದ ಪ್ರಕರಣಗಳು 1995ರಲ್ಲಿ ಇಳಿಮುಖವಾಗಿದ್ದು ಕಂಡು ಬರುತ್ತದೆ.

1994ನೇ ಸಾಲಿನಲ್ಲಿ 179 ಸರಗಳ್ಳತನ ಪ್ರಕರಣಗಳು ದಾಖಲಾಗಿದ್ದು, 56 ಪ್ರಕರಣಗಳು ಪತ್ತೆಯಾಗಿರುತ್ತವೆ. 1995ನೇ ಸಾಲಿನಲ್ಲಿ 177 ಪ್ರಕರಣಗಳು ದಾಖಲಾಗಿದ್ದು, 52 ಪ್ರಕರಣಗಳು ಪತ್ತೆಯಾಗಿರುತ್ತವೆ. ಸರಗಳ್ಳತನವು ಕಳೆದ (1995ರಲ್ಲಿ) ವರ್ಷದಲ್ಲಿ ಕಡಿಮೆಯಾಗಿರುತ್ತದೆ.

ಜನರಲ್ಲಿ ಉಂಟಾಗಿರುವ ಭೀತಿಯ ವಾತಾವರಣ ದೂರ ಮಾಡಲು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ :

1. ಈ ಪ್ರಕರಣಗಳನ್ನು ತಡೆಗಟ್ಟಲು ಬೆಂಗಳೂರು ನಗರದಲ್ಲಿ ಪ್ರತ್ಯೇಕವಾಗಿ ಹೊರವಲಯ ಪೋಲೀಸ್ ಠಾಣೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಿಬ್ಬಂದಿ ವರ್ಗದವರನ್ನು ಗುರುತಿಸಲಾದ ಸ್ಥಳಗಳಲ್ಲಿ ರಾತ್ರಿ ಮತ್ತು ಹಗಲು ಪ್ರತ್ಯೇಕವಾಗಿ ಗಸ್ತಿ ವ್ಯವಸ್ಥೆಯನ್ನು ಮಾಡಲಾಗಿದೆ.
2. ಪ್ರತಿ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಿಯಮಿತವಾದ ನೆರೆಹೊರೆಯ ಕಾವಲು ಸಮಿತಿಯವರ ಸಹಾಯವನ್ನು ಪಡೆದು ರಾತ್ರಿ ಹಾಗೂ ಹಗಲು ಗಸ್ತಿಗೆ ನಿಯೋಜಿಸಲಾಗಿದೆ.
3. ಅತಿ ಸೂಕ್ಷ್ಮ ಪ್ರದೇಶಗಳಲ್ಲಿ ಒಬ್ಬರು ಪೋಲೀಸ್ ಸಬ್ ಇನ್ಸ್‌ಪೆಕ್ಟರ್‌ರವರ ನೇತೃತ್ವದಲ್ಲಿ ವಿಶೇಷವಾದ ಗಸ್ತಿನ ವ್ಯವಸ್ಥೆಯನ್ನು ಮಾಡಲಾಗಿದೆ.
4. ಅಮವಾಸ್ಯೆ ಹಾಗೂ ಅದರ ಹಿಂದೆ ಹಾಗೂ ಮುಂದಿನ ವಾರಗಳಲ್ಲಿ ಗೃಹ ರಕ್ಷಕ ದಳದವರನ್ನು ಪೋಲೀಸ್‌ರವರ ಜೊತೆಯಲ್ಲಿ ಗಸ್ತಿಗಾಗಿ ನೇಮಕ ಮಾಡಲಾಗುತ್ತಿದೆ.
5. ಹೊರವಲಯದ ಸಾರ್ವಜನಿಕರಿಗೆ ಡಕಾಯಿತರ ಪತ್ತೆಗೆ ಹಾಗೂ ಡಕಾಯಿತಿಗಳನ್ನು ತಡೆಯುವುದಕ್ಕಾಗಿ ವಿಶೇಷ ಮಾಹಿತಿಯನ್ನು ಒದಗಿಸಿ ಅಲಾರಂನ್ನು ಅಳವಡಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ.
6. ಪೋಲೀಸರೊಂದಿಗೆ ಸಹಕರಿಸುವ ನಾಗರೀಕರನ್ನು ಗುರುತಿಸಿ ಅವರಿಗೆ ಇಲಾಖೆಯಿಂದ ಪ್ರಶಂಸಾ ಪತ್ರಗಳನ್ನು ನೀಡಲಾಗುತ್ತಿದೆ.

ಪ್ರತಿಯೊಂದು ಪೋಲೀಸ್ ಠಾಣೆಯಲ್ಲಿಯೂ ತಿಂಗಳಿಗೊಮ್ಮೆ ನಾಗರೀಕ ಸಮಿತಿ ಹಾಗೂ ನೆರೆಹೊರೆಯ ಕಾವಲು ಸಮಿತಿಯ ಸಭೆಗಳನ್ನು ಏರ್ಪಡಿಸಿ ಅಪರಾಧ ಸಂಭವಿಸುತ್ತಿರುವ ಪ್ರದೇಶಗಳನ್ನು ಗುರುತಿಸಿ ವಿಶೇಷ ಗಸ್ತು ವ್ಯವಸ್ಥೆಯನ್ನು ಏರ್ಪಾಡು ಮಾಡಲಾಗುತ್ತಿದೆ. ಮುಂಬರುವ ದಿನಗಳಲ್ಲಿಯೂ ಗಸ್ತು ಹಾಗೂ ಅಪರಾಧ ತಡೆಯುವ ಕ್ರಮಗಳನ್ನು ತೀವ್ರಗೊಳಿಸಿ, ಅಪರಾಧಗಳನ್ನು ತಡೆಗಟ್ಟುವ ಪ್ರಮಾಣಿಕ ಪ್ರಯತ್ನ ಮಾಡಲಾಗುತ್ತಿದೆ.

9) ರಾಜಾಜಿನಗರದ 6ನೇ ಬಡಾವಣೆಯಲ್ಲಿರುವ 214 ಸರ್ಕಾರಿ ವಸತಿ ಗೃಹಗಳಿಗೆ ಸುಣ್ಣ ಬಣ್ಣ ಮಾಡಿಸದಿರುವುದರಿಂದ ಗೋಡೆಗಳು ಶಿಥಿಲಗೊಂಡಿರುವುದು.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೆ, ರಾಜಾಜಿನಗರದ 6ನೇ ಬಡಾವಣೆಯಲ್ಲಿರುವ ಸುಮಾರು 214 ಸರ್ಕಾರಿ ವಸತಿ ಗೃಹಗಳಿಗೆ ಯಾವುದೇ ಸುಣ್ಣಬಣ್ಣಗಳನ್ನು ಮಾಡಿಸಿರುವುದಿಲ್ಲ. ಇದರಿಂದ ಗೋಡೆಗಳು ಶಿಥಿಲಗೊಂಡಿವೆ. ಇದರ ಜೊತೆಗೆ 5-6 ವರ್ಷಗಳ ಹಿಂದೆ ಎಲ್ಲಾ ವಸತಿ ಗೃಹಗಳಿಗೂ ಎ.ಇ.ಎಚ್. ಮಾಡಬೇಕೆಂದು ಅಂದರೆ ಎ ಯಿಂದ ಜೆ ವಸತಿ ಗೃಹಗಳಿಗೆ ಎ.ಎಚ್. ತಂತಿಗಳನ್ನು ಅಳವಡಿಸಿದ್ದು ಇದುವರೆಗೂ ಸಂಪರ್ಕವನ್ನು ನೀಡಿರುವುದಿಲ್ಲ. ಈ